ದಿನಾಂಕಃ 22-01-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲುಃ 2 ನೇ ಎದುರುದಾರರು ಪರ ಶ್ರೀ. ಎಸ್. ಬಿ. ವಕೀಲರಿಂದ

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿನಾಂಕಃ 03-07-2022 ರಂದು ನನ್ನ ಭಾಮೈದನ ಹೆಂಡತಿಗೆ ಆರೋಗ್ಯ ಸರಿ ಇಲ್ಲದ ಕಾರಣ ನಾನು ಅವರನ್ನು ನೋಡಲು ಹಂದೇನಹಳ್ಳಿ ಗ್ರಾಮದಲ್ಲಿ ಇರುವ ನನ್ನ ಭಾಮೈದನ ಮನೆಗೆ ಹೋಗಿದ್ದೆನು. ಕೆಎ-50-ಎಸ್.-8884 ರ ಹೀರೋ ಹೊಂಡಾ ಬೈಕು ನನ್ನ ಸ್ನೇಹಿತರಾದ ರಾಜು ರವರಿಗೆ ಸೇರಿದ ಬೈಕು ಆಗಿರುತ್ತದೆ. ಬೈಕನ್ನು ಚಲಾಯಿಸುವ ಬಗ್ಗೆ ನಾನು ಪರವಾರನಿಗೆಯನ್ನು ಹೊಂದಿರುತ್ತೇನೆ. ಸದರಿ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಅಪಘಾತ ಸಮಯದಲ್ಲಿ ಅದು ಕಳೆದುಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪರವಾನಿಗೆ ಕಳೆದುಹೋಗಿರುವ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಂಬಂಧಪಟ್ಟ ಕಛೇರಿಯಿಂದ ನನ್ನ ವಾಹನ ಚಾಲನಾ ಪರವಾನಿಗೆಯ ನಕಲನ್ನು ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ.

2. ಲಾರಿಯ ಹಿಂಬದಿಯ ಬಲಭಾಗದ ಚಕ್ರ ಲಾರಿಯಿಂದ ಕಳಚಿಕೊಂಡು ಹೊರಗೆ ಬಂದದ್ದನ್ನು ನಾನು ಸುಮಾರು 20 ಅಡಿ ದೂರದಿಂದ ನೋಡಿದ್ದೆನು. ಲಾರಿಯಿಂದ ಚಕ್ರ ಕಳಚಿಕೊಂಡು ಬರುವುದನ್ನು ನೋಡಿದ ನಂತರ ನಾನು ಅದನ್ನು ತಪ್ಪಿಸುವ ಪ್ರಯತ್ನ ಪಡಲಿಲ್ಲ ಅಥವಾ ನನ್ನ ಬೈಕನ್ನು ನಿಲ್ಲಿಸಲು ಪ್ರಯತ್ನಿಸಿರಲಿಲ್ಲ. ಅಪಘಾತದ ನಂತರ ಸ್ಥಳದಲ್ಲಿ ಇದ್ದ ಸಾರ್ವಜನಿಕರು ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದರು. ನನ್ನನ್ನು ನಾಗಮಂಗಲ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ನನಗೆ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಿದ್ದರು. ಸದರಿ ಆಸ್ಪತ್ರೆಯಲ್ಲಿ ನಾನು 20 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆನು. ನನಗೆ ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಆಸ್ಪತ್ರೆಯಿಂದಿ ಬಿಡುಗೊಂಡ ನಂತರ ವಾರಕ್ಕೆ ಒಮ್ಮೆ ನಾನು ಮುಂದುವರೆದ ಚಿಕಿತ್ಸೆ ಪಡೆಯಲು ಸದರಿ ಆಸ್ಪತ್ರೆಗೆ ಹೋಗುತ್ತಿದ್ದೆನು. ಈಗ್ಗೆ

ಒಂದು ವರ್ಷದ ಹಿಂದೆ ನಾನು ಕಡೆಯದಾಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೆನು. ನಾನು ಚಿಕಿತ್ಸೆ ಪಡೆದಿದ್ದ ಆಸ್ಪತ್ರೆ ಮಂಡ್ಯ ಸಾರ್ವಜನಿಕ ಆಸ್ಪತ್ರೆ ಆದ ಕಾರಣ ನಾನು ಯಾವುದೇ ರೀತಿಯ ಹಣ ಖರ್ಚು ಮಾಡಿರಲಿಲ್ಲ ಎಂದರೆ ಸರಿ. ಮುಂದಿನ ದಿನಗಳಲ್ಲಿ ಒಂದು ಲಕ್ಷ ರೂಪಾಯಿಗಳವರೆಗೆ ಖರ್ಚು ಇರುತ್ತದೆ ಎಂದು ವೈದ್ಯರು ಹೇಳಿರುತ್ತಾರೆ ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆ ರೀತಿ ಒಂದು ಲಕ್ಷ ರೂಪಾಯಿಗಳು ಖರ್ಚು ಇರುತ್ತದೆ ಎಂದು ವೈದ್ಯರು ಹೇಳಿರಲಿಲ್ಲ ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಯಾವುದೇ ವ್ಯವಸಾಯದ ಜಮೀನು ಇರುವುದಿಲ್ಲ. ನಾನು ಹಸುಗಳನ್ನು ಸಾಕಿಕೊಂಡು ಹೈನುಗಾರಿಕೆ ಮಾಡುತ್ತಿದ್ದೇನೆ ಹಾಗೂ ಕೃಷಿ ಮಾಡುತ್ತಿದ್ದೇನೆ ಎಂದು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ತಿಂಗಳಿಗೆ 40,000/- ರೂಪಾಯಿಗಳ ಆದಾಯ ಇರುತ್ತದೆ ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವೈದ್ಯರು 6 ತಿಂಗಳ ಕಾಲ ವಿಶ್ರಾಂತಿ ಪಡೆಯಬೇಕು ಎಂದು ಸೂಚಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅಪಘಾತ ಸಮಯದಲ್ಲಿ ನನಗೆ 42 ವರ್ಷ ವಯಸ್ಸು ಆಗಿತ್ತು. ಆ ಸಮಯದಲ್ಲಿ ನನಗೆ 42 ವರ್ಷ ವಯಸ್ಸು ಆಗಿತ್ತು ಎಂದು ತೋರಿಸುವ ಬಗ್ಗೆ ನಾನು ನನ್ನ ಆಧಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಅಪಘಾತ ಸಮಯದಲ್ಲಿ ಅಪಘಾತಕ್ಕೆ ಸಂಬಂಧಿಸಿದ ಕೆಎ-06-ಎ-7770 ರ ಲಾರಿಗೆ ಪರ್ಮಿಟ್ ಇರಲಿಲ್ಲ ಆ ಕಾರಣಕ್ಕೆ 2 ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ ಸಾಧಾರಣ ಗಾಯಗಳು ಆಗಿದ್ದು ಅಪಘಾತ ಹಿಂದೆ ಮಾಡುತ್ತಿದ್ದ ಕೆಲಸಗಳನ್ನು ಈಗಲೂ ಸಹ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆಗಿರುವ ನ್ಯೂನ್ಯತೆಗಳ ಬಗ್ಗೆ ವೈದ್ಯರು ಅಂಗ ನ್ಯೂನ್ಯತೆ ಪ್ರಮಾಣ ಪತ್ರ ನೀಡಿರುವುದಿಲ್ಲ.

ಮರು ವಿಚಾರಣೆ: ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಸಾಕ್ಷಿದಾರರ ಸಹಿಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಾಗಮಂಗಲ.